ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಉನಿ : ಸುಮಪ : 2018–19 :** **ದಿನಾಂಕ : 02–11–2018**

# ಪತ್ರಿಕಾ ಆಮಂತ್ರಣ

1. " Orientation Work Shop Programme on NEVA"
   ದಿನಾಂಕ: 03–11–2018. ಶನಿವಾರ, ಸಮಯ: ಬೆಳಿಗ್ಗೆ 9–00 ಗಂಟೆಗೆ
   ಸ್ಥಳ: ಕೊಠಡಿ ಸಂಖ್ಯೆ 01 02–143ಎ, ಹೆಚ್‌ಆರ್‌ಎಂಎಸ್ ಶಾಖೆಯ ತರಬೇತಿ ಕೇಂದ್ರ, ಬಹುಮಹಡಿಗಳ ಕಟ್ಟಡ, ಗೇಟ್ ನಂ. 2, ಬೆಂಗಳೂರು.

2. **ಪತ್ರಿಕಾಗೋಷ್ಠಿ:**

   "ಮಕ್ಕಳ ಹಬ್ಬ" ಕಾರ್ಯಕ್ರಮ:

   ಡಾ. ಜಯಮಾಲ ರಾಮಚಂದ್ರ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು,

   ದಿನಾಂಕ: ದಿನಾಂಕ: 03–11–2018. ಶನಿವಾರ, ಸಮಯ: ಸಂಜೆ 4–00 ಗಂಟೆಗೆ.

   ಸ್ಥಳ: ಕೊಠಡಿ ಸಂಖ್ಯೆ 313, ವಿಧಾನಸೌಧ, ಬೆಂಗಳೂರು.

**ಸಂಖ್ಯೆ: 1222/1323**

ಪತ್ರಿಕಾ ಪ್ರಕಟಣೆ

## ನ್ಯಾಯಮೂರ್ತಿಗಳು ಹಾಗೂ ಹೆಚ್ಚುವರಿ ನ್ಯಾಯಮೂರ್ತಿಗಳ ಪ್ರಮಾಣ ವಚನ ಸ್ವೀಕಾರ ಸಮಾರಂಭ:

ಬೆಂಗಳೂರು, □□□□□□□ 2, (ಕರ್ನಾಟಕ ವಾರ್ತೆ)

ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ನೂತನವಾಗಿ ನೇಮಕವಾಗಿರುವ ನ್ಯಾಯಮೂರ್ತಿಗಳು ಹಾಗೂ ಹೆಚ್ಚುವರಿ ನ್ಯಾಯಮೂರ್ತಿಗಳ ಪ್ರಮಾಣ ವಚನ ಸ್ವೀಕಾರ ಸಮಾರಂಭವನ್ನು ನವೆಂಬರ್ 3 ರಂದು ಬೆಳಿಗ್ಗೆ 10–30 ಗಂಟೆಗೆ ರಾಜಭವನದ ಗಾಜಿನ ಮನೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 1223/1323**

# ಕಾವ್ಯ ಕಮ್ಮಟ

ಬೆಂಗಳೂರು, □□□□□□□ 2, (ಕರ್ನಾಟಕ ವಾರ್ತೆ)

ಕರ್ನಾಟಕ ಸಾಹಿತ್ಯ ಅಕಾಡೆಮಿಯು 2018 ರ ಡಿಸೆಂಬರ್ 2ನೇ ವಾರದಲ್ಲಿ ರಾಜ್ಯಮಟ್ಟದ ವಸತಿ ಸಹಿತ ಐದು ದಿನಗಳ ಕಾವ್ಯ ಕಮ್ಮಟವನ್ನು ರಾಮನಗರ ಜಿಲ್ಲೆಯ ಕರೆಮೇಗಳದೊಡ್ಡಿಯ ಮುದ್ದುಶ್ರೀ ದಿಬ್ಬದಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿದೆ.

ಈಗಾಗಲೇ ಕಾವ್ಯ ರಚನೆಯಲ್ಲಿ ತೊಡಗಿರುವ ಮತ್ತು ಆಸಕ್ತಿಯಿರುವ ರಾಜ್ಯದ ಎಲ್ಲ ಭಾಗದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.

ಅರ್ಜಿ ಸಲ್ಲಿಸಲು 15-11-2018 ಕೊನೆಯ ದಿನಾಂಕವಾಗಿರುತ್ತದೆ. ಆಸಕ್ತ ಅರ್ಹ ಅಭ್ಯರ್ಥಿಗಳು ಕರ್ನಾಟಕ ಸಾಹಿತ್ಯ ಅಕಾಡೆಮಿಯ ವೆಬ್‌ಸೈಟ್ http://karnatakasahithyaacademy.org ನಿಂದ ಅರ್ಜಿ ನಮೂನೆ ಹಾಗೂ ವಿವರಗಳನ್ನು ಪಡೆದುಕೊಳ್ಳಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 1224/1324**

# ಸ್ಪರ್ಧಾತ್ಮಕ ಪರೀಕ್ಷೆಗಳ ಕೀ ಉತ್ತರ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟ

ಬೆಂಗಳೂರು, □□□□□□□ 2, (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು ಪದವಿ ಪೂರ್ವ (Non Graduate) ವಿದ್ಯಾರ್ಹತೆ ಹೊಂದಿರುವ ತಾಂತ್ರಿಕೇತರ ಗೂಪ್ 'ಸಿ' ಹುದ್ದೆಗಳಿಗೆ (ಆಶ್ರಮ ಶಾಲಾ ಶಿಕ್ಷಕರ ಹುದ್ದೆಗಳನ್ನು ಹೊರತುಪಡಿಸಿ) ದಿನಾಂಕ: 22-09-2018 ರಂದು ಮತ್ತು ಪದವಿ (Graduate) ವಿದ್ಯಾರ್ಹತೆ ಹೊಂದಿರುವ ಎಲ್ಲಾ ತಾಂತ್ರಿಕೇತರ ಗ್ರೂಪ್ 'ಸಿ' ಹುದ್ದೆಗಳಿಗೆ ದಿನಾಂಕ: 23-09-2018 ರಂದು ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಗಳ ಕೀ ಉತ್ತರಗಳನ್ನು ಆಯೋಗದ ವೆಬ್‌ಸೈಟ್ "http://kpsc.kar.nic.inKey answers" ನಲ್ಲಿ ದಿನಾಂಕ: 29-10-2018 ರಂದು ಪ್ರಕಟಿಸಿದೆ.

ಸದರಿ ಕೀ ಉತ್ತರಗಳಿಗೆ ಆಕ್ಷೇಪಣೆಗಳನ್ನು ಪರೀಕ್ಷಾ ನಿಯಂತ್ರಕರು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು – 560 001 ಇವರಿಗೆ ದಿನಾಂಕ: 05-11-2018 ರೊಳಗಾಗಿ (ಕಚೇಇಯ ಕಾರ್ಯದ ವೇಳೆಯೊಳಗೆ) ತಲುಪುವಂತೆ ಈ ವಿಳಾಸಕ್ಕೆ ಮಾತ್ರ ಕಳುಹಿಸಿಕೊಡಬೇಕು. ಆಕ್ಷೇಪಣೆಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 05-11-2018 ಮತ್ತು ಈ ಅವಧಿಯ ನಂರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ತಿರಸ್ಕರಿಸಲಾಗುವುದು.

ಸದರಿ ಕೀ ಉತ್ತರಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸುವ ಅಭ್ಯರ್ಥಿಗಳು ಪ್ರತಿ ಪ್ರಶ್ನೆಗೆ ರೂ 50 ಗಳ ಐಪಿಡಿ/ಡಿಡಿ ಮೂಲಕ ಶುಲ್ಕವನ್ನು ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು – 560 001, ಇವರ ಹೆಸರಿಗೆ ಸಂದಾಯವಾಗುವಂಗತೆ ಪಡೆದು, ಪ್ರತಿ ಪ್ರಶ್ನೆಯ ಕೀ ಉತ್ತರಕ್ಕೆ ಸಲ್ಲಿಸುವ ಆಕ್ಷೇಪಣೆಗಳಿಗೆ ಪೂರಕವಾಗಿ ದ್ವಿಪ್ರತಿಯಲ್ಲಿ ಸಲ್ಲಿಸುವ ದಾಖಲೆಗಳಿಗೆ ಸಂಬಂಧಿಸಿದಂತೆ ಲೇಖಕರ ಹೆಸರು, ಪ್ರಕಾಶನದ ಪ್ರತಿ ಇತ್ಯಾದಿ ವಿವರಗಳನ್ನು ಆಕ್ಷೇಪಣೆಗಳೊಮದಿಗೆ ನಿಗದಿತ ನಮೂನೆಯಲ್ಲಿ ನಮೂದಿಸಬೇಕು ಮತ್ತು ದಾಖಲೆಗಳ ಪ್ರತಿ ಪುಟದ ಮೇಲೆ ಪ್ರಶ್ನೆ ಸಂಖ್ಯೆ ಮತ್ತು ನೋಮದಣಿ ಸಂಖ್ಯೆಯನ್ನು ಕಡ್ಡಾಯವಾಗಿ ಬರೆಯಬೇಕು. ದಾಖಲೆಗಳನ್ನು ದ್ವಿಪ್ರತಿಯಲ್ಲಿ ಹಾಗೂ ನಿಗದಿತ ನಮೂನೆಯಲ್ಲಿ ಸಲ್ಲಿಸದ ಆಕ್ಷೇಪಣೆಗಳನ್ನು ತಿರಸ್ಕರಿಸಲಾಗುವುದು.

ಆಕ್ಷೇಪಣೆಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ಕೀ ಉತ್ತರಗಳನ್ನು ವೆಬ್‌ಸೈಟ್‌ನಿಂದ ತೆಗೆಯಲಾಗುವುದು. ಅನಂತರ ಯಾವುದೇ ಕಾರಣಕ್ಕೂ ಅಭ್ಯರ್ಥಿಗಳಿಗೆ ಕೀ ಉತ್ತರಗಳನ್ನು ನೀಡಲಾಗುವುದಿಲ್ಲ ಮತ್ತು ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 1225/1325**

## ದೀಪಾವಳಿ ಹಬ್ಬ – ಅಗ್ನಿ ಅನಾಹುತ ತಪ್ಪಿಸಲು ಅನುಸರಿಸಬೇಕಾದ ಸುರಕ್ಷತಾ ಕ್ರಮ

ಬೆಂಗಳೂರು, □□□□□□□ 2, (ಕರ್ನಾಟಕ ವಾರ್ತೆ)

ದೀಪಾವಳಿ ಹಬ್ಬದ ಪ್ರಯುಕ್ತ ಸಾರ್ವಜನಿಕರು ಪಟಾಕಿಗಳನ್ನು ಹಚ್ಚುವ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು ಕರ್ನಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಪೊಲೀಸ್ ಮಹಾ ನಿರ್ದೇಶಕರು ಸಾರ್ವಜನಿಕರಿಗೆ ಸಲಹೆಗಳನ್ನು ನೀಡಿರುತ್ತಾರೆ.

ಮಕ್ಕಳಿಗೆ ದೊಡ್ಡವರ ಸಮ್ಮುಖದಲ್ಲೇ ಪಟಾಕಿ ಹಚ್ಚಲು ತಿಳಿಸತಕ್ಕದ್ದು. ತೆರೆದ ಪ್ರದೇಶದಲ್ಲಿ ಪ ಟಾಕಿ ಹಚ್ಚುವುದು ಸುರಕ್ಷಿತ. ಯಾವುದೇ ಸಂದರ್ಭದಲ್ಲಿ ಮನೆಯೊಳಗೆ ಪಟಾಗಿ ಹಚ್ಚಬಾರದು. ಆದಷ್ಟು ಶರೀರಕ್ಕೆ ಹೊಂದಿಕೊಳ್ಳುವಂತಹ ಬಟ್ಟೆಗಳನ್ನು ಧರಿಸತಕ್ಕದ್ದು. ದೊಗಲೆ ಬಟ್ಟೆಗಳನ್ನು ಧರಿಸಬಾರದು.

ಸುರ ಸುರ ಬತ್ತಿ ಇತ್ಯಾದಿಗಳನ್ನು ಶರೀರದಿಂದ ಆದಷ್ಟು ದೂರ ಹಿಡಿಯಬೇಕು. ಪಟಾಕಿ ಹಚ್ಚುವ ಸಮಯದಲ್ಲಿ ಅದರ ಮೇಲೆ ಬಾಗಬಾರದು. ಸಾದ್ಯವಾದಷ್ಟು ಮಟ್ಟಿಗೆ ಪಕ್ಕದಿಂದ ಹಚ್ಚತಕ್ಕದ್ದು. ಯಾವುದೇ ಪಾತ್ರೆ ಒಳಗೆ ಅಥವಾ ಇಕ್ಕಟ್ಟು ಸ್ಥಳಗಳಲ್ಲಿ ಪಟಾಕಿ ಹಚ್ಚಬಾರದು.

ಪಟಾಕಿಗಳನ್ನು ಜೇಬಿನಲ್ಲಿಡಬಾರದು. ಯಾವುದೇ ಸಂದರ್ಭದಲ್ಲಿ ಪಟಾಕಿಗಳನ್ನು ಬೆಂಕಿಯ ಅಥವಾ ಉಷ್ಣತೆ ಹೆಚ್ಚಿರುವ ಸ್ಥಳಗಳಲ್ಲಿ ಇಡಬಾರದು ಹಾಗೂ ಪೊಟ್ಟಣಗಳನ್ನು ತೆರೆಯಬಾರದು. ಹಚ್ಚಿರುವ ಪಟಾಕಿ ಸಿಡಿಯದಿದ್ದರೆ ಅದನ್ನು ಪರೀಕ್ಷಿಸಲು ಪ್ರಯತ್ನಿಸಬಾರದು.

ಹೂ ಕುಂಡಗಳನ್ನು ಕೈಯಲ್ಲಿ ಹಿಡಿದುಕೊಂದು ಹಚ್ಚಬಾರದು. ರಾಕೆಟ್‌ಗಳನ್ನು ಬಳಸುವುದನ್ನು ಪೂರ್ಣ ತಪ್ಪಿಸುವುದು ಉತ್ತಮ. ಪಟಾಕಿ ಹಚ್ಚುವಾಗ ಯಾವಾಗಲೂ ಪಕ್ಕದಲ್ಲಿ ನೀರನ್ನು ಇಟ್ಟುಕೊಳ್ಳುವುದು. ಸುರಕ್ಷಿತ ಅಕಸ್ಮಿಕವಾಗಿ ಸುಟ್ಟ ಗಾಯಗಳಾದರೆ ಕೂಡಲೇ ತಣ್ಣೀರನ್ನು ಸುರಿಯತಕ್ಕದ್ದು. ಸಾಧ್ಯವಾದಷ್ಟು ಮಟ್ಟಿಗೆ ಸ್ನೇಹಿತರ ಜೊತೆ ಸೇರಿ ಸಾರ್ವಜನಿಕ ತೆರೆದ ಪ್ರದೇಶಗಳಲ್ಲಿ ಪಟಾಕಿ ಹಚ್ಚುವುದು ಸೂಕ್ತ. ಇದರಿಂದ ಎಲ್ಲರೂ ಸಂತೋಷ ಪಡಬಹುದು ಹಾಗೂ ಸುರಕ್ಷಿತ.

ಪಟಾಕಿ ಹಚ್ಚುವಾಗ ಮಕ್ಕಳು, ವಯಸ್ಸಾದವರು, ಕಾಯಿಲೆ ಇರುವವರು ಹಾಗೂ ಪ್ರಾಣಿಗಳನ್ನು ಗಮನಿಸಿ, ಅವರಿಗೆ ಆಗುವ ತೊಂದರೆಗಳನ್ನು ತಪ್ಪಿಸಲು ಪ್ರಯತ್ನಿಸಿ ಸಾಧ್ಯವಾದಷ್ಟು ಮಟ್ಟಿಗೆ ಹೆಚ್ಚು ಶಬ್ದ ಬರುವ ಪಟಾಕಿಗಳನ್ನು ಆಸ್ಪತ್ರೆಮತ್ತು ಇತರೆ ಸೂಕ್ಷ್ಮ ಪ್ರದೇಶಗಳಲ್ಲಿ ಬಳಸುವುದುನ್ನು ತಪ್ಪಿಸಿ ಎಂದು ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಪೊಲೀಸ್ ಮಹಾ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಸಂಖ್ಯೆ: 1226/1326**

# ನೇವ ಯೋಜನಾ ಪ್ರಶಿಕ್ಷಣಾ ಕಾರ್ಯಾಗಾರ

ಬೆಂಗಳೂರು, □□□□□□□□ 2, (ಕರ್ನಾಟಕ ವಾರ್ತೆ)

ವಿಧಾನ ಮಂಡಲದ ಅಧಿವೇಶನಗಳನ್ನೊಳಗೊಂಡಂತೆ ಶಾಸಕಾಂಗದ ಎಲ್ಲಾ ಕೆಲಸ ಕಾರ್ಯಗಳನ್ನು ಗಣಕೀರಣಗೊಳಿಸಲು ಹಾಗೂ ಕಾಗದ ರಹಿತ ಶಾಸಕಾಂಗವನ್ನು ಮಾಡುವ ದಿಸೆಯಲ್ಲಿ ಭಾರತ ಸರ್ಕಾರವು ಡಿಜಿಟಲ್ ಇಂಡಿಯಾ ಯೋಜನೆಯಡಿಯಲ್ಲಿ ಇ ವಿಧಾನ ಅಪ್ಲಿಕೇಶನ್ ಎಂಬ ಮಿಷನ್ ಮೂಡ್ ಯೋಜನೆಯನ್ನು ಜಾರಿಗೆ ತರಲು ನಿರ್ದೇಶಿಸಿರುತ್ತದೆ.

ಇ ವಿಧಾನ್ ಯೋಜನೆಯನ್ನು ಹಿಮಾಚಲ ಪ್ರದೇಶ ರಾಜ್ಯದಲ್ಲಿ ಪ್ರಪ್ರಥಮವಾಗಿ ಜಾರಿಗೆ ತರಲಾಗಿರುತ್ತದೆ. ಮತ್ತು ಸದನದ ಕಾರ್ಯಕಲಾಪಗಳನ್ನು ಗಣಕೀರಣಗೊಳಿಸಿರುತ್ತದೆ. ಇದರಿಂದ ಪ್ರೇರಿತವಾದ ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವಯು “One Nation One Apllication” ಎಂಬ ಶೀರ್ಷಿಕೆಯಡಿಯಲ್ಲಿ ಲೋಕಸಭಾ, ರಾಜ್ಯಸಭಾ, ಕೇಂದ್ರಾಡಳಿತ ಪ್ರದೇಶಗಳು ಹಾಗೂ ಎಲ್ಲಾ ರಾಜ್ಯಗಳ ಶಾಸಕಾಂಗಗಳಲ್ಲಿ ರಾಷ್ಟ್ರೀಯ ಇ-ವಿಧಾನ್ ಯೋಜನೆಯನ್ನು ಜಾರಿಗೆ ತರಲು ಕಾರ್ಯಕ್ರಮ ರೂಪಿಸಿರುತ್ತದೆ.

ಉಭಯ ಸದನಗಳ ಮುಖ್ಯಸ್ಥರು ವಿಧಾನ ಮಂಡಲದಲ್ಲಿ ನೇವ ಯೋಜನೆಯನ್ನು ಜಾರಿಗೆ ತರಲು ಸಹಮತವನ್ನು ವ್ಯಕ್ತಪಡಿಸಿದ್ದು, ಈ ದಿಸೆಯಲ್ಲಿ ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ

ಮಂತ್ರಾಲಯ ರೂಪಿಸುವ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದು, ಸೂಚಿಸುವ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತಿದೆ.

ದಿನಾಂಕ: 24/25 ಸೆಪ್ಟೆಂಬರ್ 2018 ರಂದು ನವದೆಹಲಿಯ ಪಾರ್ಲಿಮೆಂಟ್ ಲೈಬ್ರೈರಿ ಕಟ್ಟಡದಲ್ಲಿ ಪ್ರಶಿಕ್ಷಣ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು. ಸದರಿ ಕಾರ್ಯಾಗಾರದ ಮುಂದುವರಿದ ಭಾಗವಾಗಿ ಸಂಸದೀಯ ವ್ಯವಹಾರಗಳ ಮಂತ್ರಾಲಯವು ಪ್ರತಿ ರಾಜ್ಯಗಳಲ್ಲಿ ನೇವಾ ಪ್ರಶಿಕ್ಷಣ ಕಾರ್ಯಾಗಾರವನ್ನು ಹಮ್ಮಿಕೊಂಡಿದ್ದು ಇಂದು ಕರ್ನಾಟಕ ವಿಧಾನ ಪರಿಷತ್ತು, ಕರ್ನಾಟಕ ವಿಧಾನಸಭೆ ಸಚಿವಾಲಯದ ಅಧಿಕಾರಿ/ನೌಕರರಿಗೂ ಪ್ರಶಿಕ್ಷಣ ನೀಡಲು ಆಗಮಿಸಿರುತ್ತಾರೆ. ಪ್ರಥಮ ಹಂತದಲ್ಲಿ ಕರ್ನಾಟಕ ವಿಧಾನ ಮಂಡಲದ ಮಾಹಿತಿಗಳನ್ನು ಮಾನ್ಯ ಸದಸ್ಯರುಗಳಿಗೆ ಅಂತರ್ಜಾಲ ಹಾಗೂ ಮೊಬೈಲ್‌ಗಳಲ್ಲಿ ಹೇಗೆ ಒದಗಿಸಬೇಕೆಂಬ ಬಗ್ಗೆ ಕರ್ನಾಟಕ ವಿಧಾನ ಮಂಡಲದ ಅಧಿಕಾರಿ/ನೌಕರರಿಗೆ ತರಬೇತಿಯನ್ನು ನೀಡಿರುತ್ತಾರೆ.

ಸಮಾರಂಭವು ಇಂದು ಬೆಳಿಗ್ಗೆ 9.30 ಗಂಟೆಗೆ ಉದ್ಘಾಟನಾ ಕಾರ್ಯಕ್ರಮದೊಂದಿಗೆ ಆರಂಭಗೊಂಡಿದ್ದು ಉದ್ಘಾಟನೆಯನ್ನು ಸನ್ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಶ್ರೀ ಕೃಷ್ಣಾರೆಡ್ಡಿ, ಮಾನ್ಯ ಉಪಸಭಾಧ್ಯಕ್ಷರು ಹಾಗೂ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಶ್ರೀ ಟಿ.ಎಂ. ವಿಜಯಭಾಸ್ಕರ್, ಶ್ರೀ ಬಿ. ವಿನಯ, ರಾಜ್ಯ ಮಾಹಿತಿ ಅಧಿಕಾರಿ ಹಾಗೂ ಡಿ.ಡಿ.ಜಿ. ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ, ಬೆಂಗಳೂರು ಅವರು ನೆರವೇರಿಸಿರುತ್ತಾರೆ. ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶ್ರೀ ಐ.ಎಸ್.ಎಸ್. ಪ್ರಸಾದ್, ಹಣಕಾಸು ಇಲಾಖೆ, ಇ–ಆಡಳಿತ ಮತ್ತು ಶ್ರೀ ದ್ವಾರಕನಾಥ್ ಬಾಬು, ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು, ಹಾಜರಿದ್ದರು.

ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯದ ಜಂಟಿ ಕಾರ್ಯದರ್ಶಿಗಳಾದ ಡಾ. ಸತ್ಯಪ್ರಕಾಶ್, ಅಧೀನ ಕಾರ್ಯದರ್ಶಿಗಳಾದ ಶ್ರೀ ಮುಖೇಶ್ ಕುಮಾರ್ ಹಾಗೂ ಶ್ರೀ ಸುಜೀತ್ ಕುಮಾರ್ ಅವರು ಪ್ರಶಿಕ್ಷಣ ಕಾರ್ಯಾಗಾರವನ್ನು ನೆರವೇರಿಸಲು ಆಗಮಿಸಿರುತ್ತಾರೆ.

ಡಾ ಸತ್ಯಪ್ರಕಾಶ್ ಅವರು ನೇವಾ ಅಪ್ಲಿಕೇಶನ್ ಬಗ್ಗೆ ನೇವಾದಲ್ಲಿ ಭಾರತದ ಸರ್ಕಾರದ ಸಂಸದೀಯ ವ್ಯವಹಾಗಳ ಮಂತ್ರಾಲಯದ ಪಾತ್ರಗಳ ಬಗ್ಗೆ ನೇವಾ ತಂತ್ರಾಶವನ್ನು ಜಾರಿಗೊಳಿಸುವಾಗ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಬಜೆಟ್ ಶೇರಿಂಗ್ ಬಗ್ಗೆ ಡಿಜಿಟಲ್ ಇಂಡಿಯಾ "One Nation One Application" ಬಗ್ಗೆ ಈಗಾಗಲೇ ಮುಂದುವರಿದಿರುವ ಕರ್ನಾಟಕ ಈ ಮಹತ್ವಾಂಕ್ಷಿ ಯೋಜನೆಗೆ ತೋರುತ್ತಿರುವ ಹುಮ್ಮಸ್ಸಿನ ಬಗ್ಗೆ ವಿವರಿಸುತ್ತಾ ಸುಮಾರು 31 ರಾಜ್ಯಗಳ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಸಚಿವಾಲಯಗಳು ಈ ವ್ಯವಸ್ಥೆಯನ್ನು ಒಪ್ಪಿಕೊಂಡಿರುವ ಬಗ್ಗೆ ತಿಳಿಸುತ್ತಾ ಮಾಹಿತಿಗಳನ್ನು ಈ ಅಪ್ಲಿಕೇಶನ್‌ನಲ್ಲಿ ಅಪ್‌ಲೋಡ್ ಮಾಡುತ್ತಾ ಹೋದಂತೆ ತನ್ನಿಂದ ತಾನಾಗಿ ಕಾರ್ಯಕಲಾಪಗಳ ಪಟ್ಟಿ ಕೂಡ ತಯಾರಾಗುತ್ತದೆ ಎಂದು ವಿವರಿಸಿದರು. ಮುಂದುವರೆದು ನೇವಾ ಯೋಜನೆಯಲ್ಲಿ ಕೇಂದ್ರ ಸರ್ಕಾರ ಶೇ 60 ರಷ್ಟು ರಾಜ್ಯ ಸರ್ಕಾರವು ಶೇ 40 ರಷ್ಟು ಹಣಕಾಸನ ಸಹಭಾಗಿತ್ವವನ್ನು ಹೊಂದಿರುತ್ತದೆ ಎಂದು ವಿವರಿಸಿದರು. ಹಾಗೆಯೇ ನೇವಾ ಅಪ್ಲಿಕೇಶನ್ ಉಪಯೋಗದಿಂದ ಶಾಸಕರು ಮತ್ತು ಸಂಸದರು ಪರಸ್ಪರ ಸಂಪರ್ಕ ಸಾಧಿಸಿದಂತಾಗುತ್ತದೆ ಎಂದರು.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯದರ್ಶಿ ಶ್ರೀಮತಿ ಕೆ.ಆರ್. ಮಹಾಲಕ್ಷ್ಮೀ ಅವರು ಸಮಾರಂಭಕ್ಕೆ ಆಗಮಿಸಿದ ಗಣ್ಯರು ಹಾಗೂ ಅಧಿಕಾರಿ, ನೌಕರರರನ್ನು ಸ್ವಾಗತಿಸಿದರು.

ಕರ್ನಾಟಕ ವಿಧಾನಸಭೆ ಸಚಿವಾಲಯದ ನಿರ್ದೇಶಕರಾದ ಶ್ರೀಮತಿ ಎಂ.ಕೆ. ವಿಶಾಲಾಕ್ಷಿ ಅವರು ನೇವಾ ತಂತ್ರಾಂಶದ ಪ್ರಮುಖ ವೈಶಿಷ್ಟ್ಯವನ್ನು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಗಣ್ಯರು ಮತ್ತು ಅಧಿಕಾರಿಗಳಿಗೆ ತಿಳಿಸಿದರು.

ರಾಷ್ಟ್ರೀಯ ಸೂಚನಾ ವಿಜ್ಞಾನದ ತಾಂತ್ರಿಕ ನಿರ್ದೇಶಕರಾದ ಶ್ರೀ ಲಕ್ಷ್ಮೀಶ್ ಅವರು ನೇವಾ ತಂತ್ರಾಂಶದ ತಾಂತ್ರಿಕ ವೈಶಿಷ್ಟ್ಯಗಳನ್ನು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಗಣ್ಯರು ಮತ್ತು ಅಧಿಕಾರಿಗಳಿಗೆ ಪರಿಚಯಿಸಿದರು.

ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ನೇವಾ ಯೋಜನೆಯನ್ನು ರಾಜ್ಯ ವಿಧಾನ ಮಂಡಲದಲ್ಲಿ ಜಾರಿಗೆ ತರುವ ಬಗ್ಗೆ ಸರ್ಕಾರದ ಸಹಕಾರವನ್ನು ನೀಡುತ್ತೇವೆ ಎಂದು ತಿಳಿಸುತ್ತಾ ಪರಿಣಾಮಕಾರಿಯಾಗಿ ಜಾರಿಯಾಗುವ ದಿಸೆಯಲ್ಲಿ ಸಂಪೂರ್ಣ ಬೆಂಬಲವನ್ನು ಇ–ಆಡಳಿತ ಇಲಾಖೆಯ ಮೂಲಕ ನೀಡುತ್ತೇವೆ ಎಂದು ತಮ್ಮ ಭಾಷಣದಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಉಪಸಭಾಧ್ಯಕ್ಷರಾದ ಶ್ರೀ ಕೃಷ್ಣಾರೆಡ್ಡಿ ಅವರು ಮಾತನಾಡಿ ಈ ಯೋಜನೆ ಜಾರಿಗೆ ಬರುವುದರಿಂದ ಕಾಗದ ರಹಿತ ತಂತ್ರಾಂಶವಾಗುವುದರಿಂದ ಬಳಕೆಯಾಗುತ್ತಿರುವ ಕಾಗದಗಳು ಕಡಿಮೆಯಾಗಿ ಗಿಡಮರಗಳನ್ನು ಕಡಿಯುವ ಸಂಖ್ಯೆ ಕೂಡಾ ಇಳಿಮುಖವಾಗಿ ನಿಸರ್ಗಕ್ಕೆ ಕೊಡುಗೆಯಾಗಲಿದೆ ಎಂದರು ಇದು ಪ್ರಥಮವಾಗಿ ಕಠಿಣವಾಗಬಹುದು. ಆದರೆ ನಂತರದ ದಿನಗಳಲ್ಲಿ ಸಲೀಸಾಗುವುದು ಎಂದರು ಇದನ್ನು ಜಾರಿಗೊಳಿಸುವುದರಿಂದ ಇಂದಿನ ಪೀಳಿಗೆಗೆ ಅನುಕೂಲಕರವಾಗುತ್ತದೆ ಎಂದು ತಿಳಿಸುತ್ತಾ, ಇದೊಂದು ಹೆಮ್ಮೆಯ ತಂತ್ರಾಂಶವೆಂದು ಶ್ಲಾಘಿಸಿದರು.

ಸಭಾಪತಿಗಳಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರು ಶಾಸಕಾಂಗದಲ್ಲಿ ಮಾಹಿತಿ ತಂತ್ರಜ್ಞಾನದ ಅವಶ್ಯಕತೆ ಹಾಗೂ ಮಾನ್ಯ ಸದಸ್ಯರುಗಳಿಗೆ ಅದರಿಂದ ಆಗುವ ಉಪಯೋಗಗಳು ಸಾರ್ವಜನಿಕರಿಗೆ ತಮ್ಮ ಕ್ಷೇತ್ರದ ಸಾಧನೆಗಳ ಬಗ್ಗೆ ಪ್ರತಿನಿಧಿಗಳು ಶಾಸಕಾಂಗದಲ್ಲಿ ಯಾವ ರೀತಿ ತಲುಪಿಸುತ್ತಾರೆಂಬ ಮಾಹಿತಿಗಳನ್ನು ಪಡೆಯುವುದಕ್ಕೆ ಮಾಹಿತಿ ತಂತ್ರಜ್ಞಾನವು ಎಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಿದ್ದಾರೆ. ಹಾಗೂ ಮುಂದಿನ ದಿನಗಳಲ್ಲಿ ಮಾಹಿತಿ ತಂತ್ರಜ್ಞಾನವನ್ನು ಬಳಸಿ ಮಾನ್ಯ ಸದಸ್ಯರುಗಳು ತಮ್ಮ ಶಾಸಕಾಂಗ ಕಾರ್ಯಗಳನ್ನು ನಿರ್ವಹಿಸಲು ಅಗತ್ಯವಾದ ಎಲ್ಲಾ ತರಬೇತಿಗಳನ್ನು ಪರಿಣಿತರಿಂದ ಒದಗಿಸುವ ಹಾಗೂ ಇದಕ್ಕೆ ಸಹಕಾರಿಯಾಗಿ ಮೂಲಭೂತ ಸೌಕರ್ಯಗಳನ್ನು ಸೃಜಿಸುವ ಮೂಲಕ ನೇವಾ ಯೋಜನೆಯನ್ನು ಜಾರಿಗೆ ತರುವ ಬಗ್ಗೆ ರೂಪುರೇಷೆಗಳನ್ನು ಸಿದ್ಧಪಡಿಸಲು ಉಭಯ ಸಚಿವಾಲಯಗಳು ಕಾರ್ಯಪ್ರವೃತ್ತಿಯಾಗಲು ಅಗತ್ಯ ಸಹಕಾರ ನೀಡಲಾಗುವುದು ಎಂದರು ಹಾಗೂ ವಿಧಾನ ಮಂಡಲದ ಅಧಿಕಾರಿ/ನೌಕರರು ಇದನ್ನು ಮೈಲಿಗಲ್ಲಾಗಿ ಅಭಿವೃದ್ಧಿಗೊಳಿಸಲು ಕರೆ ನೀಡಿದರು. ಈ ಅಪ್ಲಿಕೇಶನಲ್ಲಿ ಅಪ್‌ಲೋಡ್ ಮಾಡುವ ಮಾಹಿತಿಗಳು ಕೂಡಲೇ ಸಾರ್ವಜನಿಕರಿಗೆ ಸಿಗುವಂತಾಗುವುದರಿಂದ ಇದೊಂದು ಅರ್ಥಗರ್ಭಿತ ಯೋಜನೆಯಾಗುವುದರಿಂದ ಈ ಯೋಜನೆಯನ್ನು ಜಾರಿಗೆ ತರುವಲ್ಲಿ ಅಧಿಕಾರಿ/ಸಿಬ್ಬಂದಿಯವರು ನೂರಕ್ಕೆ ನೂರರಷ್ಟು ಪ್ರಯತ್ನ ಹಾಗೂ ತ್ಯಾಗಗಳನ್ನು

ಮಾಡಿ ಯಶಸ್ವಿಗೊಳಿಸಬೇಕೆಂದು ಸೂಚಿಸಿದರು. ಚಿಕ್ಕ ರಾಜ್ಯವಾದ ಹಿಮಾಚಲ ಪ್ರದೇಶದವರು ಜಾರಿಗೊಳಿಸಿದ ಮೇಲೆ ನಮ್ಮಂತಹ ದೊಡ್ಡ ರಾಜ್ಯ ಕೂಡಾ ಈ ಯೋಜನೆಯನ್ನು ಜಾರಿಗೆ ತರಲು ಶ್ರಮಿಸಬೇಕೆಂದು ತಿಳಿಸಿದರು.

ಕರ್ನಾಟಕ ವಿಧಾನಸಭೆ ಸಚಿವಾಲಯದ ತಾಂತ್ರಿಕ ನಿರ್ದೇಶಕರಾದ ಶ್ರೀ ಜೆ.ಈ. ಶಶಿಧರ್ ಅವರು ವಂದನಾರ್ಪಣೆ ಅರ್ಪಿಸಿದರು.

**ಸಂಖ್ಯೆ: 1227/1327**

## ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

**ಬೆಂಗಳೂರು, ನವೆಂಬರ್ 02 (ಕರ್ನಾಟಕ ವಾರ್ತೆ) :**

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. **ದಿನಾಂಕ: 04-11-2018 ರ** ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಕಬ್ಬನ್ ಉದ್ಯಾನವನದ ಆವರಣದಲ್ಲಿ ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ **ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು** ಏರ್ಪಡಿಸಲಾಗಿದೆ.

2) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

**I ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ**

- ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ **ಯೂನಿವರ್ಸ್ ಆರ್ಟ್ ಫೌಂಡೇಶನ್** ಸಂಸ್ಥೆಯ ಸಹಯೋಗದೊಂದಿಗೆ ಶ್ರೀ **ರಾಜಣ್ಣ. ಎಸ್.** ರವರಿಂದ **ಭರತನಾಟ್ಯ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 1228/1328**

## ಸಾರಿಗೆ ಅದಾಲತ್

**ಬೆಂಗಳೂರು, ನವೆಂಬರ್ 02 (ಕರ್ನಾಟಕ ವಾರ್ತೆ) :**

**ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಬೆಂಗಳೂರು (ಕೇಂದ್ರ) ದಿಂದ ಸಾರ್ವಜನಿಕರ ಕುಂದು ಕೊರತೆ ಹಾಗೂ ಸಲಹೆಗಳನ್ನು ಪಡೆಯುವ ಸಲುವಾಗಿ ನವೆಂಬರ್ 11 ರಂದು ಮಧ್ಯಾಹ್ನ 3-00 ಗಂಟೆಗೆ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ, ಬೆಂಗಳೂರು (ಕೇಂದ್ರ) 2 ನೇ ಮಹಡಿ, ಬಿಡಿಎ ವಾಣಿಜ್ಯ ಸಂಕೀರ್ಣ, ಕೋರಮಂಗಲ ಬೆಂಗಳೂರು -34 ಇಲ್ಲಿ ಸಾರಿಗೆ ಅದಾಲತ್ ಏರ್ಪಡಿಸಿದೆ.**

**ಸಾರಿಗೆ ಅದಾಲತ್‌ಗೆ ಸಾರಿಗೆ ಇಲಾಖೆಯ ಹಿರಿಯ ಅಧಿಕಾರಿಗಳು ಹಾಜರಿದ್ದು, ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಸೂಕ್ತ ಪರಿಹಾರವನ್ನು ಒದಗಿಸುವ ಬಗ್ಗೆ ಕ್ರಮ ಕೈಗೊಳ್ಳುವರು. ಈ ಕಚೇರಿ ವ್ಯಾಪ್ತಿಯ ಸಾರ್ವಜನಿಕರು ಇದರ ಪ್ರಯೋಜನ ಪಡೆಯಲು ಪ್ರಕಟಣೆ ತಿಳಿಸಿದೆ.**

**ಸಂಖ್ಯೆ: 1229/1329**

## ಕನ್ನಡ ಪುಸ್ತಕ ಪ್ರಾಧಿಕಾರದಿಂದ ಕನ್ನಡ ಪುಸ್ತಕ ಶೇ. 50 ರಿಯಾಯಿತಿ

**ಬೆಂಗಳೂರು, ನವೆಂಬರ್ 02 (ಕರ್ನಾಟಕ ವಾರ್ತೆ) :**

**ಕನ್ನಡ ರಾಜ್ಯೋತ್ಸವ ಪ್ರಯುಕ್ತ ನವೆಂಬರ್ ಮಾಹೆಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಪ್ರಕಟವಾಗಿರುವ ಎಲ್ಲಾ ಪುಸ್ತಕಗಳನ್ನು ಶೇ. 50 ರಿಯಾಯಿತಿ ದರದಲ್ಲಿ ಮಾತ್ರ ನೀಡಲಾಗುವುದು.**

**ಪುಸ್ತಕಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲಾ ಜಿಲ್ಲಾ ಕಚೇರಿಗಳಲ್ಲಿ, ಕನ್ನಡ ಪುಸ್ತಕ ಪ್ರಾಧಿಕಾರದ ಎಲ್ಲಾ ಸಿರಿಗನ್ನಡ ಪುಸ್ತಕ ಮಾರಾಟ ಮಳಿಗೆಗಳಲ್ಲಿ, ರವೀಂದ್ರ ಕಲಾಕ್ಷೇತ್ರದ ಆವರಣ ಜೆ.ಸಿ. ರಸ್ತೆ, ಬೆಂಗಳೂರು ಇಲ್ಲಿ ಹಾಗೂ ಆನ್‌ಲೈನ್ ಮೂಲಕ**

**www.kannadapustakapradhikara.com ನಲ್ಲಿ ಖರೀದಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂರವಾಣಿ 080–22484516/ 22107704/05 ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.**

**ಸಂಖ್ಯೆ: 1231/1331**

**ಛಾಯಾಚಿತ್ರ ಶೀರ್ಷಿಕೆ:**

ವಿಧಾನಸಭೆಯ ಅರ್ಜಿಗಳ ಸಮಿತಿಯು ವಿಧಾನಸಭೆಯ ಉಪ ಸಭಾಧ್ಯಕ್ಷ ಎಂ.ಕೃಷ್ಣಾರೆಡ್ಡಿ ಅವರ ನೇತೃತ್ವದಲ್ಲಿ ಇಂದು ಆನೇಕಲ್ ತಾಲ್ಲೂಕು ಹುಲಿಮಂಗಲ ಗಾಮ ಸರ್ವೆ ನಂ 350, 155 ಹಾಗೂ 156 ರಲ್ಲಿ ದೂರಿನನ್ವಯ ಪರಿವೀಕ್ಷಣೆ ನಡೆಸಿತು.

**ಸಂಖ್ಯೆ: 1232/1333**

## Deepavali Festival-2018 : Safety measures.

Bengaluru, November 2 (Karnataka Information)

To ensure an accident free Deepavali Festival-2018 Karnataka State Fire and Emergency Service Department suggests the following safety measures.

Allow the children to light fireworks only under the supervision of an adult members.

Do not light fire crackers inside the house but light them in an open space away from combustible materials. Never wear loose, flowing clothes while lighting fireworks. Hold sparklers away from the body . Never bend over the fireworks while lighting them. Light them from the side. Never light fireworks under confinement in a metal container. Never keep crackers in the pocket. Never store fire works or unpack them near a flame or source of heat. Never return to fire work once lit-it may explode or your face. Never light a flower pot holding it in hand. While lighting rocket like crackers, take precaution that it does not enter into an open window, door, open building, hut, etc. As for as possible avoid lighting of rockets. Never take unnecessary risk while lighting fire works just to show off to your friends. Keep a bucket of water handy while lighting fireworks and in case of any burn injury immediately pour clean water on the burnt skin. Get all your friend together and pool in your fireworks. Light them in an open space. Have some adult to supervise the display. This way you will be able to enjoy many more types of fire works and it will also be safer and cheaper. Show concern for infants, the aged, sick and animals. Do no light loud fire works near them or near Hospital. In case of any fire accident, public are requested to inform fire control room ie., Phone No. 101 and in case of Bengaluru City Apart from 101, Phone No.'s 080-22971500 or 080-22971600 can be contacted says official press release.

**ಸಂಖ್ಯೆ: 1234/1335**

**ಚಿಕ್ಕಮಾರನಹಳ್ಳಿ(ದೇವಸಂದ್ರ)–ಕಮ್ಮಖಂಡ್ರಿಗ ಮಾರ್ಗದಲ್ಲಿ ಹೊಸ ಬಸ್ ಸಂಚಾರ**

**ಬೆಂಗಳೂರು, ನವೆಂಬರ್ 02 (ಕರ್ನಾಟಕ ವಾರ್ತೆ) :**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬೆಂಗಳೂರು ಕೇಂದ್ರೀಯ ವಿಭಾಗದ ವತಿಯಿಂದ ಚಿಕ್ಕಮಾರನಹಳ್ಳಿ(ದೇವಸಂದ್ರ) ಹಾಗೂ ಸುತ್ತಮುತ್ತಲಿನ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಚಿಕ್ಕಮಾರನಹಳ್ಳಿ(ದೇವಸಂದ್ರ)–ಕಮ್ಮಖಂಡ್ರಿಗ ಮಾರ್ಗದಲ್ಲಿ ಹೊಸದಾಗಿ ಸಾರಿಗೆ ಸೇವೆಯನ್ನು ಆರಂಭಿಸಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 1237/1337**

**ಚಿಕ್ಕಮಾರನಹಳ್ಳಿ(ದೇವಸಂದ್ರ)–ಕಮ್ಮಖಂಡ್ರಿಗ ಮಾರ್ಗದಲ್ಲಿ ಹೊಸ ಬಸ್ ಸಂಚಾರ**

**ಬೆಂಗಳೂರು, ನವೆಂಬರ್ 02 (ಕರ್ನಾಟಕ ವಾರ್ತೆ) :**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬೆಂಗಳೂರು ಕೇಂದ್ರೀಯ ವಿಭಾಗದ ವತಿಯಿಂದ ಚಿಕ್ಕಮಾರನಹಳ್ಳಿ(ದೇವಸಂದ್ರ) ಹಾಗೂ ಸುತ್ತಮುತ್ತಲಿನ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಚಿಕ್ಕಮಾರನಹಳ್ಳಿ(ದೇವಸಂದ್ರ)–ಕಮ್ಮಖಂಡ್ರಿಗ ಮಾರ್ಗದಲ್ಲಿ ಹೊಸದಾಗಿ ಸಾರಿಗೆ ಸೇವೆಯನ್ನು ಆರಂಭಿಸಿದೆ ಎಂದು ಪ್ರಕಟಣೆ ತಿಳಿಸಿದೆ.

**ಸಂಖ್ಯೆ: 1238/1338**

## ಸಚಿವರ ಪ್ರವಾಸ

**ಬೆಂಗಳೂರು, ನವೆಂಬರ್ 02 (ಕರ್ನಾಟಕ ವಾರ್ತೆ) :**

ಗಣಿ ಮತ್ತು ಭೂ ವಿಜ್ಞಾನ ಹಾಗೂ ಮುಜರಾಯಿ ಸಚಿವ ರಾಜಶೇಖರ ಬಿ. ಪಾಟೀಲ ಅವರು ನವೆಂಬರ್ 3 ರಂದು ಹಾಸನ ಜಿಲ್ಲೆಯಲ್ಲಿ ಪ್ರವಾಸಕೈಗೊಂಡು ಅಂದೇ ರಾತ್ರಿ ಕೇಂದ್ರಸ್ಥಾನಕ್ಕೆ ಹಿಂತಿರುಗುವರು ಎಂದು ಪ್ರಕಟಣೆ.